**ದಿನಾಂಕಃ 17.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ವಾದಿ ಪರ ವಕೀಲರಿಂದಃ**

ನಾನು ನನ್ನ ಸಾಕ್ಷ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿದ್ದು, ಅದನ್ನು ನಾನೇ ಹೇಳಿ ಬೆರಳಚ್ಚು ಮಾಡಿಸಿ ಓದಿ, ತಿಳಿದುಕೊಂಡು ಸಹಿಯನ್ನು ಹಾಕಿರುತ್ತೇನೆ. ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ.

1. The authorization letter dated 20.11.2025 is got marked as Ex.P.1.
2. ಕ್ವಾರೆ ಲೀಸ್ ನ ದೃಢೀಕೃತ ನಕಲು ಪ್ರತಿಯನ್ನು ನಿಪಿ-2 ಎಂದು
3. ಅಸಲು ದಾವಾ ಸಂಖ್ಯೆ 452/92 ಇದರ ತೀರ್ಪಿನ ಮತ್ತು ಡಿಕ್ರಿಯ ದೃಢೀಕೃತ ನಕಲು ಪ್ರತಿಯನ್ನು ನಿಪಿ-3 ಎಂದು
4. ಆರ್ ಎ ನಂ.9/98 ಇದರ ತೀರ್ಪಿನ ಮತ್ತು ಡಿಕ್ರಿಯ ದೃಢೀಕೃತ ನಕಲು ಪ್ರತಿಯನ್ನು ನಿಪಿ-4 ಎಂದು
5. ಸರ್ವೆ ನಂ.75 ಇದರ ಪಹಣಿಯನ್ನು ಹಾಜರು ಪಡಿಸಿದ್ದು ಅದು 2007-08 ರ ಸಂಬಂಧಿಸಿದ ದಾಖಲೆಯಾಗಿದ್ದು ಅದನ್ನು ನಿಪಿ-5 ಎಂದು
6. ದಿಃ24.07.2008 ರಂದು ರಾಮನಗರ ಜಿಲ್ಲಾ ಪೋಲೀಸ್ ಅಧೀಕ್ಷಕರಿಗೆ ನೀಡಿದ ದೂರಿನ ಪ್ರತಿ ಹಾಗೂ ಸಿಪಿಐ ಇವರಿಗೆ ನೀಡಿದ ದೂರಿನ ಕುರಿತು ದಿಃ30.07.2008 ರಂದು ನೀಡಿದ ಹಿಂಬರಹದ ಎರಡು ದಾಖಲಾತಿಗಳನ್ನು ಕ್ರಮವಾಗಿ ನಿಪಿ-6 ಮತ್ತು ನಿಪಿ-7 ಎಂದು
7. ತಹಶೀಲ್ದಾರ್ ಇವರಿಗೆ ದಿಃ12.07.2008 ರಂದು ನೀಡಿದ ದೂರು ಹಾಗೂ ದಿಃ14.12.2007 ರಂದು ನೀಡಿದ ಹಿಂಬರಹವನ್ನು ಒಟ್ಟಾಗಿ ನಿಪಿ-8 ಎಂದು
8. ದಿಃ17.07.2008 ರಂದು ಜಿಲ್ಲಾಧಿಕಾರಿಗೆ ನೀಡಿದ ದೂರು, ದಿಃ19.07.2008 ರಂದು ಎಸ್ ಪಿ ರಾಮನಗರ ಇವರಿಗೆ ನೀಡಿದ ದೂರು, ದಿಃ15.07.2008 ರಂದು ರೇಂಜ್ ಫಾರೆಸ್ಟ ಅಧಿಕಾರಿ ಕನಕಪುರ ಇವರಿಗೆ ನೀಡಿದ ದೂರು, ದಿಃ18.07.2008 ರಂದು ಉಪನಿರ್ದೇಶಕರು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಇವರಿಗೆ ನೀಡಿದ ದೂರು ಮತ್ತು ದಿಃ09.07.2008 ರಂದು ಸಬ್ ಇನ್ಸಪೆಕ್ಟರ್ ಕೋಡಿಹಳ್ಳಿ ಇವರಿಗೆ ನೀಡಿದ ದೂರಿನ ಹಿಂಬರಹಗಳನ್ನು ಕ್ರಮವಾಗಿ ನಿಪಿ-9 ರಿಂದ 13 ಎಂದು
9. ಕಲ್ಲು ಸಾಕಾಣಿಕೆ ಮಾಡಲು ನೀಡಿದ 5 ಪರ್ಮಿಟ್ ಗಳನ್ನು ಒಟ್ಟಾಗಿ ನಿಪಿ-14 ಎಂದು ಗುರುತಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ.

**ಅಪರ ಸಿಜೆ ಮತ್ತು ಜೆ.ಎಂ.ಎಫ್.ಸಿ.,**
**ಕನಕಪುರ.**